			00	00	
26	Bijapur	98-17	9827-24	9926-01	
27	Bagalkote	---	165-13	165-13	
28	Kodagu	---	---	---	
29	Uttar Kannada	---	---	---	
30	Yadagiri	---	---	---	
	Total:	13856-09	87005-06	100861-15	

ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ

9(48) **ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ**:(ಭಾಲ್ಕಿ) ಮಾನ್ಯ ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳ ಆಯವ್ಯಯದಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಎಷ್ಟು ಹಣವನ್ನು ಮೀಸಲಿಡಲಾಗಿತ್ತು, ಈ ಪೈಕಿ ಪ್ರತಿವರ್ಷ ಎಷ್ಟು ಹಣವನ್ನು ಈ ವ್ಯಾಪ್ತಿಯ ಜಿಲ್ಲೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಮತ್ತು ವೆಚ್ಚ ಮಾಡಲಾಗಿದೆ. (ಪ್ರತಿ ಜಿಲ್ಲೆಗೆ ವೆಚ್ಚ ಮಾಡಲಾದ ಹಣದ ವಿವರಗಳನ್ನು ವರ್ಷಾವಾರು ಅಂಕಿ ಅಂಶಗಳಲ್ಲಿ ಒದಗಿಸುವುದು)

ಆ) ಸದರಿ ಮಂಡಳಿಗೆ ವರ್ಷದಿಂದ ವರ್ಷಕ್ಕೆ ಅನುದಾನ ಕಡಿಮೆಯಾಗುತ್ತಿರುವುದು ನಿಜವೆ, ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಇ) ಪ್ರಸಕ್ತ ವರ್ಷದ ಆಯವ್ಯಯದಲ್ಲಿ ಮಂಡಳಿಗೆ ಎಷ್ಟು ಅನುದಾನವನ್ನು ನೀಡಿದೆ;

ಈ) ಪ್ರಸಕ್ತ ಸಾಲಿನ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆಯೇ, ಹಾಗಿದ್ದಲ್ಲಿ ಇದರ ವಿವರಗಳೇನು;

ಉ) ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಭಾಲ್ಕಿ ಮತಕ್ಷೇತ್ರದಲ್ಲಿ ಮಂಡಳಿಯ ಅನುದಾನದಿಂದ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು ಮತ್ತು ಇದಕ್ಕೆ ಅಗತ್ಯವಿರುವ ಹಣವೆಷ್ಟು(ಪೂರ್ಣ ವಿವರ ಒದಗಿಸುವುದು)

ಶ್ರೀ ಗೋವಿಂದ ಎಂ. ಕಾರಜೋಳ(ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು):

ಅ) ಮಂಡಳಿಗೆ ಕಳೆದ ಮೂರು ವರ್ಷಗಳಲ್ಲಿ ಒದಗಿಸಲಾದ ಮತ್ತು ಬಿಡುಗಡೆಯಾದ ಅನುದಾನದ ವಿವರಗಳು ಕೆಳಕಂಡಂತಿದೆ.

ಕ್ರ ಸಂ	ವರ್ಷ	ಮೀಸಲಿಟ್ಟ ಅನುದಾನ	ಬಿಡುಗಡೆಯಾದ ಅನುದಾನ
1	2007–08	4687.00	4437.00
2	2008–09	3520.00	1605.00
3	2009–10	3100.00	2100.00

ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ.

ಆ) ಹೌದು, ವಿಶೇಷ ಅಭಿವೃದ್ಧಿ ಯೋಜನೆಯಡಿ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಹಿಂದುಳಿದ ತಾಲ್ಲೂಕುಗಳಿಗೆ ವಿವಿಧ ಅಭಿವೃದ್ಧಿ ಇಲಾಖೆಗಳಿಂದ ಅನುದಾನವನ್ನು ಒದಗಿಸಲಾಗುತ್ತಿದೆ.

ಇ) ಪ್ರಸಕ್ತ ವರ್ಷದ(2010--11) ಆಯವ್ಯಯದಲ್ಲಿ ಮಂಡಳಿಗೆ ರೂ.2300.00 ಲಕ್ಷಗಳ ಅನುದಾನವನ್ನು ನೀಡಲಾಗಿದೆ.

ಈ) ಪ್ರಸಕ್ತ ಸಾಲಿನಲ್ಲಿ ರೂ.2300.00 ಲಕ್ಷಗಳ ಸಾರಾಂಶ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆ ನೀಡಲಾಗಿದೆ.

ಕ್ರಿಯಾ ಯೋಜನೆಯನ್ನು ಅನುಬಂಧ–2ರಲ್ಲಿ ಒದಗಿಸಿದೆ.

ಉ) ಪ್ರಸಕ್ತ ಸಾಲಿನಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರದಂತೆ ಭಾಲ್ಕಿ ಕ್ಷೇತ್ರಕ್ಕೆ ರೂ.39.20ಲಕ್ಷಗಳನ್ನು ಒದಗಿಸಲಾಗಿದೆ. ಈ ಅನುದಾನದಲ್ಲಿ ರಸ್ತೆ ಮತ್ತು

ಸೇತುವೆ, ಸಾಮಾಜಿಕ, ಅರಣ್ಯೀಕರಣ ಹಾಗೂ ಭೂ ಅಂತರ್ಜಲ ವಲಯದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಅನುಬಂಧ–1

ಕಳೆದ ಮೂರು ವರ್ಷಗಳಲ್ಲಿ ಜಿಲ್ಲಾವಾರು ಖರ್ಚು ಮಾಡಿದ ಹಣದ ವಿವರ

(ರೂ. ಲಕ್ಷಗಳಲ್ಲಿ)

ಜಿಲ್ಲೆಗಳು	2007–08	2008–09	2009–10
ಗುಲಬರ್ಗ	1302.17	1290.92	1171.50
ಬೀದರ	555.24	790.92	669.46
ರಾಯಚೂರು	586.21	550.28	431.27
ಕೊಪ್ಪಳ	512.62	317.39	613.34
ಬಳ್ಳಾರಿ	545.22	424.87	430.05
ದಾವಣಗೆರೆ	181.00	94.00	106.00
ಒಟ್ಟು	**3682.45**	**3468.38**	**3841.698**

ಅನುಬಂಧ–2

2010–11ನೇ ಸಾಲಿನ ಕ್ರಿಯಾ ಯೋಜನೆಯ ಸಾರಾಂಶ

(ರೂ.ಲಕ್ಷಗಳಲ್ಲಿ)

1	ಮುಂದುವರೆದ ಕಾಮಗಾರಿಗಳಿಗಾಗಿ	366.88
2	ಹೊಸ ಕಾಮಗಾರಿಗಳಿಗಾಗಿ	
	ಸಾಮಾನ್ಯ ಕಾಮಗಾರಿಗಳು	1079.63
	ಎಸ್.ಸಿ.ಪಿ. ಕಾಮಗಾರಿಗಳು	400.00
	ಟಿ.ಎಸ್.ಪಿ. ಕಾಮಗಾರಿಗಳು	170.00
3	ಸರ್ಕಾರದ ವಿವೇಚನಾ ನಿಧಿ	108.50
4	ಅಧ್ಯಕ್ಷರ ವಿವೇಚನಾ ನಿಧಿ	45.00
6	ಆಡಳಿತ ವೆಚ್ಚಕ್ಕಾಗಿ	130.00
	ಒಟ್ಟು	**2300.00**

ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ